ಓ ಎಸ್ಃ 541/2022

ಪಿ ಡಬ್ಲ್ಯೂ ಃ 1

ದಿನಾಂಕಃ 21.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರವರ ಪರ ಶ್ರೀ ಎಂ ಸಿ ಜೆ ವಕೀಲರಿಂದಃ**

ನಿ ಪಿ 3 ಸ.ನಂ. 36/4 ಕ್ಕೆ ಸಂಬಂದಪಟ್ಟ ಪಹಣಿ ಆಗಿರುತ್ತದೆ ಎಂದರೆ ಸರಿ. ಸ.ನಂ. 36/4 ರ ಒಟ್ಟು ವಿಸ್ತೀರ್ಣ 30 ಗುಂಟೆ ಇರುತ್ತದೆ. ನಿ ಪಿ 3 ರಲ್ಲಿ ಸದರಿ ಸ.ನಂ. 36/4 ರಲ್ಲಿ 30 ಗುಂಟೆ ಜಮೀನಿರುತ್ತದೆ ಎಂದು ಎಲ್ಲೂ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಎಂ ಆರ್ ನಂಬರ್ 6/1991-92 ರಂತೆ ಜಮೀನಿನ ಪಹಣಿ ಮತ್ತು ಮ್ಯುಟೇಷನ್ 20 ಗುಂಟೆಗೆ ಆಗಿರುತ್ತದೆ ಎಂದರೆ ಸುಳ್ಳು. ಸ.ನಂ. 36/4 ರಲ್ಲಿ 30 ಗುಂಟೆ ಜಮೀನಿಗೆ ನಾನು ದಾವೆಯನ್ನು ಹೂಡಿರುತ್ತೇನೆ, ಆದರೆ ನಾನು ದಾಖಲಾತಿಯನ್ನು ಕೇವಲ 20 ಗುಂಟೆಗೆ ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರೆ ಸುಳ್ಳು. ಸ.ನಂ. 36/4 ಕ್ಕೆ ನಾನು ನಿ ಪಿ 3 ನ್ನು ಬಿಟ್ಟರೆ ಬೇರೆ ಯಾವುದೇ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸುಳ್ಳು.

ಖಾನೇಷುಮಾರಿ ನಂಬರ್ 39/42 ಐಟಂ ನಂಬರ್ 3 ಕ್ಕೆ ಸಂಬಂದಿಸಿದಂತೆ ಕ್ರಯಪತ್ರವಾಗಿರುವ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಖಾನೇಷುಮಾರಿ ನಂಬರ್ 39/42 ಐಟಂ ನಂಬರ್ 3 ಕ್ಕೆ ಸಂಬಂದಿಸಿದಂತೆ ನನ್ನ ತಾತ , ಅಜ್ಜಿ ಅಥವಾ ಮುತ್ತಾತನ ಹೆಸರಿನಲ್ಲಿ ದಾಖಲಾತಿ ಇರುವಂತೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಐಟಂ ನಂಬರ್ 3 ನಮ್ಮ ತಾತನಿಗೆ ನಮ್ಮ ಮುತ್ತಾತನಿಂದ ಬಂದಿರುತ್ತದೆ. ಪ್ರತಿವಾದಿ 1 ರವರು 1979 ರಲ್ಲಿ ಕ್ರಯಕ್ಕೆ ಪಡೆದಿರುವ ಸ್ವತ್ತಾಗಿರುತ್ತದೆ, ಅದು ನನ್ನ ತಾತ , ಮುತ್ತಾತನಿಂದ ಬಂದಿರುವ ಸ್ವತ್ತಾಗಿರುವುದಿಲ್ಲ ಎಂದರೆ ಸುಳ್ಳು.

ಪ್ರತಿವಾದಿ 1 ರವರು ಕ್ರಯಕ್ಕೆ ತೆಗೆದುಕೊಂಡ ದಿನದಿಂದ ಇಲ್ಲಿಯವರೆಗೂ ನನ್ನ ಅಣ್ಣನ ಹೆಸರಿನಲ್ಲಿ ದಾವಾ ಸ್ವತ್ತು ಇರುತ್ತದೆ ಎಂದರೆ ಸರಿ. ಅದು ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ. ನನ್ನ ಅಣ್ಣ ಆ ದಿನದಿಂದಲೂ ಖಾತಾ ಕಂದಾಯ ಕಟ್ಟಿಕೊಂಡು ಸ್ವಾಧೀನದಲ್ಲಿದ್ದುಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಸ್ವತ್ತು ಎಂದು ನುಡಿಯುತ್ತಾರೆ. ಅವರು ಅವರ ಸ್ವಂತ ದುಡಿಮೆಯಿಂದ ಐಟಂ ನಂಬರ್ 3 ನ್ನು ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. ಐಟಂ ನಂಬರ್ 4 ರ ಖಾನೇಷುಮಾರಿ ನಂಬರ್ 40/43 ರ ವಿಸ್ತೀರ್ಣ ಎಷ್ಟು ಇರುತ್ತದೆ ಎಂದರೆ 31 ಅಡಿ ಉದ್ದ ಮತ್ತು 40 ಅಡಿ ಅಗಲ ಇರುತ್ತದೆ ಮತ್ತು ಅದರಲ್ಲಿ ಕಲ್ಲು ಅಂಕಣದ ಮನೆ ಇರುತ್ತದೆ. ಖಾನೇಷುಮಾರಿ ನಂಬರ್ 39/42 ಐಟಂ ನಂಬರ್ 3 ವಿಸ್ತೀರ್ಣ ಎಷ್ಟು ಇರುತ್ತದೆ ಎಂದರೆ 31 ಅಡಿ ಉದ್ದ ಮತ್ತು 40 ಅಡಿ ಅಗಲ ಇರುತ್ತದೆ ಮತ್ತು ಮನೆಯ ಮುಂದೆ 8 ಅಡಿ ಅಡ್ಡ ಜಾಗ ಮತ್ತು 8 ಅಡಿ ಉದ್ದ ಜಾಗ ಇರುತ್ತದೆ.

ನಾನು ಐಟಂ ನಂಬರ್ 3 ಮತ್ತು 4 ಕ್ಕೆ ನೀಡಿರುವ ವಿಸ್ತೀರ್ಣ ನನ್ನ ವಾದಪತ್ರ ಮತ್ತು ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸುಳ್ಳು. ಸದರಿ ಐಟಂ ನಂಬರ್ 4 ನನ್ನ ಅಣ್ಣ ತಮ್ಮಂದಿರ ಹೆಸರಿನಲ್ಲಿ ಖಾತೆ ಬರುತ್ತಿದೆ. ಐಟಂ ನಂಬರ 4 ರ ಸ್ವತ್ತು ಪ್ರತಿವಾದಿ 4 ರವರ ಹೆಸರಿಗೆ ಬರುತ್ತಿದೆ ಎಂದರೆ ಸುಳ್ಳು. ಅದು ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ. ಐಟಂ ನಂಬರ್ 3,4,1 ಮತ್ತು 6 ರ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡ ನಂತರ ಯಾರ ಭಾಗಕ್ಕೆ

ಬಂದಿರುತ್ತದೋ ಅವರ ಹೆಸರು ಖಾತೆದಾರರಾಗಿ ಬರುತ್ತಿದೆ ಎಂದರೆ ಸುಳ್ಳು. ಐಟಂ ನಂಬರ್ 2 ರ ಚೆಕ್ ಬಂದಿ ನನಗೆ ಗೊತ್ತು. ಪೂರ್ವಕ್ಕೆ ವೀರಚನ್ನಪ್ಪ, ಪಶ್ಚಿಮಕ್ಕೆ ಮರಿಯಪ್ಪ, ಉತ್ತರಕ್ಕೆ Varthur ಗ್ರಾಮ ಮತ್ತು ದಕ್ಷಿಣಕ್ಕೆ ಮರಿಯಪ್ಪ ಇರುತ್ತಾರೆ. ಐಟಂ ನಂಬರ್ 2 ರಲ್ಲಿ ಇರುವ 30 ಗುಂಟೆಯಲ್ಲಿ 20 ಗುಂಟೆ ಜಮೀನನ್ನು ನನ್ನ ಅಣ್ಣ ನಿ ಪಿ 7 ರ ಪ್ರಕಾರ ಕ್ರಯಕ್ಕೆ ಪಡೆದಿರುವ ಸ್ವ ತ್ತಾಗಿರುತ್ತದೆ ಎಂದರೆ ಸುಳ್ಳು. ನನ್ನ ಅಣ್ಣ ಸದರಿ ಐಟಂ ನಂಬರ್ 2 ರ ಉಳಿಕೆ 10 ಗುಂಟೆ ಜಮೀನನ್ನು ನಿ ಪಿ 11 ರ ಪ್ರಕಾರ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಸದರಿ ಸ್ವತ್ತು ಒಟ್ಟು ಕುಟಂಬದ ಸ್ವತ್ತು, ಕ್ರಯಕ್ಕೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಐಟಂ ನಂಬರ 5 ರ ಸ್ವತ್ತನ್ನು ನಿಪಿ 6 ರಂತೆ ನನ್ನ ಅಣ್ಣ ಕ್ರಯಕ್ಕೆ ಪಡೆದಿರುವ ಸ್ವತ್ತಾಗಿರುತ್ತದೆ ಎಂದರೆ ಸುಳ್ಳು. ನನ್ನ ಅಣ್ಣ ಐಟಂ ನಂಬರ್ 5 ರ ಸ್ವತ್ತನ್ನು ನಿ ಪಿ 8 ರಂತೆ ಪ್ರತಿವಾದಿ 1 ರವರು ರಾಜ್ ಕುಮಾರ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಐಟಂ ನಂಬರ್ 5 ರ ಖಾತೆ ಮತ್ತು ಮಾಲೀಕತ್ವ ರಾಜ್ ಕುಮಾರ್ ರವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ಬೇರೆಯವರು ಸ್ವಾ ಧೀನದಲ್ಲಿರುತ್ತಾರೆ, ಈಗ ರಾಜ್ ಕುಮಾರ್ ರವರು ತೀರಿಕೊಂಡಿರುತ್ತಾರೆ, ಸಾಕ್ಷಿಯು ಮುಂದುವರೆದು ನನ್ನ ಅಣ್ಣ ಐಟಂ ನಂಬರ್ 5 ನ್ನು ಮಾರಾಟ ಮಾಡಿದ ನಂತರ 30 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ.

ಐಟಂ ನಂಬರ್ 5 ರ ಕ್ರಯಪತ್ರವನ್ನು ಈ ದಿನದವರೆವಿಗೂ ಪ್ರಶ್ನೆ ಮಾಡಿರುತ್ತೇನೆ. ಈ ದಾವೆಯಲ್ಲಿ ರಾಜ್ ಕುಮಾರ್ ಮತ್ತು ರಾಜ್ ಕುಮಾರ್ ರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ರಾಜ್ ಕುಮಾರ್ ರವರು ಖರೀದಿ ಮಾಡಿದ ನಂತರ ಅವರೇ ಖಾತೆ ಕಂದಾಯ ಎಲ್ಲ ಕಟ್ಟಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನನ್ನ ಅಣ್ಣ ಐಟಂ ನಂಬರ್ 2 ಮತ್ತು 4 ನ್ನು ಖರೀದಿ ಮಾಡಿದ ಸಮಯದಲ್ಲಿ ನಾನು ಮದುವೆಯಾಗಿ ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸಾಕ್ಷಿ ಉತ್ತರ ಕೊಡದೇ ಬೇರೆ ವಿಷಯಗಳನ್ನು ಹೇಳುತ್ತಿದ್ದಾರೆ. ಸದರಿ ವಿಷಯಗಳು ಈಗಾಗಲೇ ಸಾಕ್ಷಿ ವಿಚಾರಣೆಯಲ್ಲಿ ಬಂದಿರುವುದರಿಂದ ಅದನ್ನು ಇಲ್ಲಿ ನಮೂದು ಮಾಡಿರುವುದಿಲ್ಲ. ನಾವು ಅಕ್ಕ ತಂಗಿಯರು 3 ಜನರು ಈ ದಾವಾ ಸ್ವತ್ತಗಳನ್ನು ನನ್ನ ಸಹೋದರರು ಖರೀದಿ ಮಾಡುವ ಮುಂಚೆಯೇ ಮದುವೆಯಾಗಿ ನಮ್ಮ ಗಂಡನ ಮನೆಯಲ್ಲಿದ್ದೇವು ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಇರುವ ವಿಚಾರಗಳನ್ನು ನಮ್ಮ ವಕೀಲರಿಗೆ ನಾನೇ ಹೇಳಿರುತ್ತೇನೆ.

ಪ್ರಮಾಣಪತ್ರದ 3 ಪ್ಯಾರಾದಲ್ಲಿ ಇರುವ ವಿಚಾರಗಳನ್ನು ನಮ್ಮ ವಕೀಲರಿಗೆ ನಾನೇ ಹೇಳಿ ಬರೆಯಿಸಿರುತ್ತೇನೆ. ನಾನು ಸದರಿ 3 ನೇ ಪ್ಯಾರಾದಲ್ಲಿ ಸಂಕ್ಷಿಪ್ತವಾಗಿ ಯಾವ ಸ್ವತ್ತನ್ನು ರಾಜ್ ಕುಮಾರ್ ರವರಿಗೆ ಮಾರಾಟ ಮಾಡಿ ಖರೀದಿ ಮಾಡಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸುಳ್ಳು. ಐಟಂ ನಂಬರ್ 3 ರ ಸ್ವತ್ತನ್ನು ನಮ್ಮ ತಂದೆ ನಾಮಕಾವಸ್ತೆಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎನ್ನುವ ವಿಚಾರ ನನಗೆ ನನ್ನ ತಾಯಿ ಹೇಳಿರುತ್ತಾರೆ. ನನ್ನ ತಂದೆಯ ಮರಣದ ನಂತರ ನಾಮಕಾವಸ್ತೆ ಕ್ರಯಪತ್ರವನ್ನು ಮರಳಿ ಬರೆಯಿಸಿಕೊಳ್ಳಲು ನಾನು ಪ್ರಯತ್ನ ಮಾಡಿರುವುದಿಲ್ಲ, ನನ್ನ ಅಣ್ಣನವರ ಹೆಸರಿನಲ್ಲಿ ಎಲ್ಲ ಇರುತ್ತದೆ.

ನನ್ನ ಪ್ರಮಾಣಪತ್ರದ 4 ನೆ ಪ್ಯಾರಾದಲ್ಲಿ ಹೇಳಿರುವ ಕ್ರಯಪತ್ರವನ್ನು ಪ್ರಶ್ನಿಸಿ ದಾವೆಯನ್ನು ಹಾಕಿರುತ್ತೇನೆ. ಸದರಿ ದಾವೆಯ ಬಗ್ಗೆ ವಿವರಗಳನ್ನು ನೀಡಿ ಎಂದರೆ ಸಾಕ್ಷಿ ಈ ದಾವೆಯೇ ಸದರಿ ದಾವೆಯಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಕಿರುವ ದಾಖಲಾತಿಗಳ ಬಗ್ಗೆ ಮಾಹಿತಿ ನನಗೆ ಇರುವುದಿಲ್ಲ ಎಂದರೆ ಸುಳ್ಳು. ಐಟಂ ನಂಬರ್ 2 ರ ಸ್ವತ್ತನ್ನು ಪ್ರತಿವಾದಿ 1 ರವರು ಪಡೆದಿರುವ ಸ್ವಯಾರ್ಜಿತ ಸ್ವತ್ತು ಎಂದರೆ ಸುಳ್ಳು. ನಾನು ಮತ್ತು ನನ್ನ ಅಕ್ಕ ತಂಗಿಯರು ಮದುವೆಯಾದ ನಂತರ ಒಟ್ಟು ಕುಟುಂಬದಲ್ಲಿ ಇರಲಿಲ್ಲ ಮತ್ತು ಸದರಿ ಸ್ವತ್ತುಗಳ ಸ್ವಾ ಧೀನ ಇರಲಿಲ್ಲ

ಎಂದರೆ ಸುಳ್ಳು. ನಾನು ಸುಮಾರು ವರ್ಷಗಳ ಹಿಂದೆ ಊರು ಬಿಟ್ಟು ಹೋದ ಕಾರಣ ನನ್ನ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸುಳ್ಳು. ದಾವಾ ಐಟಂ ನಂಬರ್ 2 ಮತ್ತು 5 ರ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ಸುಮಾರು ವರ್ಷಗಳ ಹಿಂದೆ ಆಗಿರುವ ಕ್ರಯವನ್ನು ಪ್ರಶ್ನಿಸಿರುವ ಕಾರಣ ನನ್ನ ದಾವೆಯಲ್ಲಿ ಕಾಲಮಿತಿ ಇರುವುದಿಲ್ಲ ಎಂದರೆ ಸುಳ್ಳು. ಪ್ರತಿವಾದಿಗಳು ಈ ಹಿಂದೆ ವಿಭಾಗ ಮಾಡಿಕೊಂಡು ನನ್ನ ಮದುವೆಯಾದ ನಂತರ ಅವರವರು ಸ್ವಾ ಧೀನದಲ್ಲಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ ಅವರವರ ಹೆಸರಿನಲ್ಲಿ ದಾಖಲಾತಿಗಳು ಪ್ರತ್ಯೇಕವಾಗಿ ಬರುತ್ತಿದೆ ಎಂದರೆ ಸುಳ್ಳು. ಅದೇ ರೀತಿ ಈ ದಾವೆಯ ಕಾಲವಿಳಂಬದ ಬಗ್ಗೆ ನನ್ನ ವಾದಪತ್ರದಲ್ಲಾಗಲಿ ಮತ್ತು ಪ್ರಮಾಣಪತ್ರದಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**